ಕಳೆದ ಮೂರು ವರ್ಷಗಳಲ್ಲಿ ಸರ್ಕಾರ ಮಾಡಿರುವ ಸಾಲದ ಮೊತ್ತ

390 (741) ಶ್ರೀ ಜಾರ್ಜ್ ಕೆ.ಜಿ. (ಸರ್ವಜ್ಞನಗರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ಸರ್ಕಾರ ಮಾಡಿರುವ ಸಾಲದ ಮೊತ್ತವೆಷ್ಟು;

ಆ) 2006–07ನೇ ಅವಧಿಯಲ್ಲಿ ಇದ್ದ ಸಾಲದ ಮೊತ್ತವೆಷ್ಟು;

ಇ) 2010–11ನೇ ಸಾಲಿನಲ್ಲಿ ತೆರಿಗೆ ಬಾಬ್ತುನಿಂದ ಸಂಗ್ರಹವಾದ ಆದಾಯವೆಷ್ಟು?

ಬಿ.ಎಸ್. ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಗಳು)

ಅ) (ರೂ. ಕೋಟಿಗಳಲ್ಲಿ)

	2007–08	**2008–09**	**2009–10**
ಆಂತರಿಕ ಋಣ	1550.68	7995.99	7310.01
ಭಾರತ ಸರ್ಕಾರದ ಸಾಲ	806.00	596.16	680.85
ಒಟ್ಟು	**2356.68**	**8592.15**	**7990.86**

ಆ) 31–3–2007ಕ್ಕೆ ಬಾಕಿ ಇರುವ ಒಟ್ಟು ದಾಯಿತ್ವ 59643 ಕೋಟಿ ರೂ.ಗಳು.

ಇ) ಡಿಸೆಂಬರ್ 2010ರ ಅಂತ್ಯಕ್ಕೆ ಸ್ವಂತ ತೆರಿಗೆ ರಾಜಸ್ವದಿಂದ ಸಂಗ್ರಹವಾದ ಮೊತ್ತ 27209 ಕೋಟಿ ರೂ.ಗಳು.

ಪ್ರವಾಸೋದ್ಯಮ ಇಲಾಖೆಯ ಯೋಜನೆಗಳು

393 (887) ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ) ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಹಾಗೂ ಯುವಜನಸೇವಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಸರ್ಕಾರದ ನೂತನ ಯೋಜನೆಗಳು ಹಾಗೂ ಅನುಷ್ಠಾನಕ್ಕಾಗಿ ಮಾಡಿದ ವೆಚ್ಚದ ವಿವರಗಳೇನು;

ಆ) ಕೇಂದ್ರ ಸರ್ಕಾರದ ಪುರಸ್ಕೃತ ಪ್ರವಾಸೋದ್ಯಮ ಅಭಿವೃದ್ಧಿ ಯೋಜನೆಗಳು ಮತ್ತು ಆ ಉದ್ದೇಶಕ್ಕಾಗಿ ಮಂಜೂರಾದ ಅನುದಾನದ ಮೊತ್ತ ಎಷ್ಟು;

ಇ) ರಾಜ್ಯದ ಕರಾವಳಿ ಪ್ರದೇಶದ ವ್ಯಾಪ್ತಿಯ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಸರ್ಕಾರದ ಯೋಜನೆಗಳೇನು?

ಜಿ. ಜನಾರ್ಧನ ರೆಡ್ಡಿ (ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಹಾಗೂ ಯುವಜನಸೇವಾ ಸಚಿವರು)

ಆ) ರಾಜ್ಯದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಹಮ್ಮಿಕೊಂಡಿರುವ ನೂತನ ಯೋಜನೆಗಳು ಈ ಕೆಳಕಂಡಂತಿವೆ.

1) ಹಂಪಿಯಲ್ಲಿ ವಿಜಯನಗರ ಥೀಮ್ ಪಾರ್ಕ್ ಯೋಜನೆ.

2) ರಾಜ್ಯದಲ್ಲಿ ಹೆಲಿಟೂರಿಸಂ ಅಭಿವೃದ್ಧಿಪಡಿಸುವ ಯೋಜನೆ

3) ಜಿಲ್ಲಾ ಕೇಂದ್ರಗಳಲ್ಲಿ ಪ್ರವಾಸಿ ಸೌಧಗಳನ್ನು ನಿರ್ಮಿಸುವ ಯೋಜನೆ

4) ಮಂಗಳೂರು, ಬಳ್ಳಾರಿ ಜಿಲ್ಲಾ ಕೇಂದ್ರಗಳಲ್ಲಿ ಇನ್ಸಿಟಿಟ್ಯೂಟ್ ಆಫ್ ಹೋಟೆಲ್ ಮ್ಯಾನೇಜ್‌ಮೆಂಟ್‌ಗಳನ್ನು ಸ್ಥಾಪಿಸುವ ಯೋಜನೆ

5) ರಾಜ್ಯದಲ್ಲಿ ಪರಿಸರ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ನೂತನವಾಗಿ ಶಿವಮೊಗ್ಗದ ಜೋಗ್ ಬಳಿ ಇರುವ ತಲಕಳಲೆ, ಪ್ರದೇಶಗಳಲ್ಲಿ ಜಂಗಲ್ ಲಾಡ್ಜಸ್ ಅಂಡ್ ರಿಸಾರ್ಟ್ಸ್ ನಿರ್ಮಿಶಲಾಗುತ್ತಿದೆ. ಬೀದರ್ ನ ವಿಲಾಸಮರ ಟ್ಯಾಂಕ್, ಬಳ್ಳಾರಿಯ ದರೋಜಿ ಕರಡಿಧಾಮ ಪ್ರದೇಶಗಳಲ್ಲಿ ಜಂಗಲ್ ಲಾಡ್ಜಸ್ ಅಂಡ್ ರಿಸಾರ್ಟ್ಸ್‌ಗಳ ನಿರ್ಮಾಣ.

6) ಉಡುಪಿ ಜಿಲ್ಲೆಯ ಆನೆಜರಿ ಹಾಗೂ ಸೀತಾನದಿ, ಶಿವಮೊಗ್ಗ ಜಿಲ್ಲೆಯ ಸಕ್ಕರೆ ಬೈಲು, ಉತ್ತರ ಕನ್ನಡ ಜಿಲ್ಲೆಯ ಕುಳಗಿ ಹಾಗೂ ಅಣಶಿ, ಚಿಕ್ಕಮಗಳೂರು ಜಿಲ್ಲೆಯ ಭಗವತಿ, ಚಾಮರಾಜನಗರ ಜಿಲ್ಲೆಯ ಗೋಪಿನಾಥಂ, ಉತ್ತರ ಕನ್ನಡ ಜಿಲ್ಲಡಯ ಕ್ಯಾಸಲ್ ರಾಕ್, ಚಾಮರಾಜನಗರ ಜಿಲ್ಲೆಯ ಹೊಗೇನಕಲ್ ಹಾಗೂ ಚಿತ್ರದುರ್ಗ ಜಿಲ್ಲೆಯ ಜೋಗಿಮಟ್ಟಿ ಪ್ರದೇಶಗಳಲ್ಲಿ ಜಂಗಲ್ ಕ್ಯಾಂಪ್ಸ್ ಅಂಡ್ ಟ್ರೇಲ್ಸ್ ಅಭಿವೃದ್ಧಿಪಡಿಸುವುದು.

ಹಂಪಿಯಲ್ಲಿ ವಿಜಯನಗರ ಥೀಮ್ ಪಾರ್ಕ್ ಯೋಜನೆಗೆ ರೂ. 1000.00 ಲಕ್ಷ, ಹೆಲಿಟೂರಿಸಂ ಯೋಜನೆ ಅಭಿವೃದ್ಧಿಪಡಿಸಲು ರೂ. 100.00 ಲಕ್ಷ, ಪರಿಸರ ಪ್ರವಾಸೋದ್ಯಮ ಕೇಂದ್ರಗಳ ನಿರ್ಮಾಣಕ್ಕೆ

ರೂ. 4938.81 ಲಕ್ಷ ಹಾಗೂ ಜಂಗಲ್ ಕ್ಯಾಂಪ್ಸ್ ಅಂಡ್ ಟ್ರೇಲ್ಸ್‌ಗಳ ಯೋಜನೆಗಳನ್ನು ನಿರ್ಮಿಸಲು ರೂ. 703.00 ಲಕ್ಷಗಳನ್ನು ಬಿಡುಗಡೆ ಮಾಡಿ ವೆಚ್ಚ ಮಾಡಲಾಗಿದೆ.

ಆ) 2009–10ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ನೂತನವಾಗಿ ಮಂಜೂರು ಮಾಡಿರುವ ಯೋಜನೆಗಳ ಸಂಖ್ಯೆ 12 ಆಗಿರುತ್ತದೆ. ಈ ಯೋಜನೆಗಳಿಗೆ ಮಂಜೂರಾದ ಮೊತ್ತ ರೂ. 4227.18 ಲಕ್ಷಗಳಾಗಿರುತ್ತದೆ ಹಾಗೂ ಯೋಜನೆಗಳನ್ನು ಪ್ರಾರಂಭಿಸಲು ಬಿಡುಗಡೆಯಾಗಿರುವ ಮೊದಲ ಕಂತಿನ ಮೊತ್ತ ರೂ. 3381.80 ಲಕ್ಷಗಳು.

ಇ) ರಾಜ್ಯದ ಕರಾವಳಿ ಪ್ರದೇಶದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಇಲಾಖೆಯು ವಿವಿಧ ಯೋಜನೆಗಳನ್ನು ಹಮ್ಮಿಕೊಂಡಿರುತ್ತದೆ. ಯೋಜನೆಗಳ ವಿವರ ಕೆಳಗಿನಂತಿವೆ.

1) ಮಂಗಳೂರು ತಣ್ಣೀರುಭಾವಿ ಕಡಲತೀರ ಪ್ರದೇಶದಲ್ಲಿ ಆಕ್ವಾ ಮೆರಿನ್ ಪಾರ್ಕ್ ಹಾಗೂ ಗಾಲ್ಫ್ ಕೋರ್ಸ್‌ಗಳನ್ನು ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಲು ಕ್ರಮ ವಹಿಸಲಾಗಿದೆ.

2) ತಣ್ಣೀರುಭಾವಿಯಿಂದ ಸುಲ್ತಾನ್ ಬತ್ತೇರಿಯವರೆಗೆ ತೂಗು ಸೇತುವೆ ನಿರ್ಮಾಣ.

3) ಉತ್ತರ ಕನ್ನಡ ಜಿಲ್ಲೆಯ ಟ್ಯಾಗೂರ್ ಬೀಚ್ ಬಳಿ ಹೆಚ್ಚುವರಿ ಸೌಲಭ್ಯಗಳ ನಿರ್ಮಾಣ.

4) ಸೇಂಟ್ ಮೇರಿಸ್ ಐಲ್ಯಾಂಡ್‌ನಲ್ಲಿ ಪ್ರವಾಸಿ ಸೌಲಭ್ಯಗಳ ಅಭಿವೃದ್ಧಿ.

ಹೊಸದಾಗಿ ರಚನೆ ಮಾಡಿದ ಕರಾವಳಿ ಪ್ರಾಧಿಕಾರ

394(870) ಶ್ರೀ ಜೆ.ಡಿ. ನಾಯ್ಕ (ಭಟ್ಕಳ) ಮಾನ್ಯ ಉನ್ನತ ಶಿಕ್ಷಣ, ಯೋಜನೆ ಮತ್ತು ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರವು ಹೊಸದಾಗಿ ರಚನೆ ಮಾಡಿದ ಕರಾವಳಿ ಪ್ರಾಧಿಕಾರಕ್ಕೆ ಕರಾವಳಿ ಭಾಗದ ಶಾಸಕರನ್ನು ಯಾವುದೇ ಸಭೆಗಳಿಗೆ ಕರೆಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಕರಾವಳಿ ಪ್ರಾಧಿಕಾರದ ಸಭೆಗಳಿಗೆ ಶಾಸಕರನ್ನು ಆಹ್ವಾನಿಸದಿರಲು ಕಾರಣವೇನು;